## ಜನಸೇವಕ ಬಾಳು

ಕಲರ್ಸ್ ಕನ್ನಡ ವಾಹಿನಿಯ 'ಪವಾಡ ಪುರುಷ' ಧಾರಾವಾಹಿ ಚೆನ್ನಾಗಿದೆ. ಬಾಳು ಮಾಮ ಪಾತ್ರಧಾರಿಯ ಅದ್ಭುತ ನಟನೆ ಕಥೆಗೆ ಜೀವ ತುಂಬಿದಂತಿದೆ. ಕಥೆಯ ಮೂಲ ಮರಾಠಿಯಾದರೂ ಕನ್ನಡದ ಜಾಯಮಾನಕ್ಕೆ ಹೊಂದಿಕೆಯಾಗುವಂತೆ ರೂಪಿಸಿದ್ದಾರೆ. ಇದು ವ್ಯಕ್ತಪಡಿಸುವ ಜನಸೇವೆಯ ಕಾಳಜಿ ಮೆಚ್ಚುವಂತಿದೆ.

—ಶೀಲಾ ಎಸ್.ಎಂ.

## ಸಾಧಕರಿಗೆ ವೇದಿಕೆ ಆಗಲಿ

ದೃಶ್ಯ ಮಾಧ್ಯಮಗಳು ದಿನ ಬೆಳಗಾದರೆ ಹಗರಣ, ವಂಚನೆ, ಆಪಾದನೆ, ಏಟಿಗೆ ಎದುರೇಟು, ಟಾಂಗ್, ಜೈಲು ಬೇಲು, ಎ1, ಎ2 – ಹೀಗೆ ಆರಂಭಿಸಿ, ರಾತ್ರಿ ಆದರೂ ಅದನ್ನೇ ಪ್ರಸಾರ ಮಾಡುತ್ತಾರೆ. ಆರ್ಭಟಿಸಿಕೊಂಡು ಹೇಳಿದ್ದನ್ನೇ ಪುನಃ ಹೇಳಿ ವೀಕ್ಷಕರಿಗೆ ಕಾಟ ಕೊಡುತ್ತಿವೆ. ಜನರಿಗೆ ಬೇಕಾಗಿರುವುದು ಅದೇ ಎಂಬ ಸಬೂಬು ಬೇರೆ!

ಇತ್ತೀಚೆಗೆ ರತನ್ ಟಾಟಾ ನಿಧನರಾದಾಗ ಇಡೀ ದೇಶವೇ ಮರುಗಿತು. ನಮಗೆ ಅರಿವಿರದ ಅವರ ಹಲವು ಆದರ್ಶಗಳ ಬಗ್ಗೆ ದೃಶ್ಯ ಮಾಧ್ಯಮಗಳ ಮೂಲಕವೇ ನಮಗೆ ತಿಳಿಯಿತು. ಈ ರೀತಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರ ಬಗ್ಗೆ, ಸಾಧಕರು ಎದುರಿಸಿದ ಸಮಸ್ಯೆಗಳ ಬಗ್ಗೆ, ಸಮಾಜ ಸುಧಾರಕರ ಜೀವನಶೈಲಿಯ ಬಗ್ಗೆ ದಿನವೂ ಕಾರ್ಯಕ್ರಮ ನಿರೂಪಿಸಲು ಸಾಧ್ಯವಿಲ್ಲವೇ? ಇದರಿಂದ ಜನಸಮುದಾಯಕ್ಕೂ ಅನುಕೂಲ ಆಗಬಹುದು.

—ಬಿ.ಎನ್. ಭರತ್, ಬೆಂಗಳೂರು

## ಗೊಂದಲದ ಗೂಡಾದ 'ಶ್ರೀರಸ್ತು'

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು' ಧಾರಾವಾಹಿ, ಕೃತಕ ದೃಶ್ಯಗಳಿಂದ ನಂಬಲು ಸಾಧ್ಯವೇ ಆಗದ ರೀತಿ ಯದ್ವಾತದ್ವಾ ಓಡುತ್ತಿದೆ. ಸಿಡುಕು ಮೋರೆ ಹಾಕಿಕೊಂಡು ತನ್ನ ತಾಯಿ ಕ್ಯಾನ್ಸರ್ ಪೀಡಿತಳು ಎನ್ನುವುದನ್ನು ತಿಳಿಯಲು ಒಂದು ಸಂಚಿಕೆ ಬೇಕೆ? ಸಂಚಿಕೆಯ ಓಘಕ್ಕೆ ತಡೆ ಹಾಕುವ ತುಳಸಿ, ತೀರಾ ಕಳಪೆ ಕುತಂತ್ರಗಳನ್ನು ಶಾರ್ವರಿ ಮತ್ತು ದೀಪಿಕಾ ಹೆಣೆಯುತ್ತಿದ್ದಾರೆ. ಪೆದ್ದಾಗಿ ಆಡುವ ಅಭಿ ಮತ್ತು ಅವಿ ಕಿರಿಕಿರಿ ಹುಟ್ಟಿಸುತ್ತಾರೆ. ಕೆಲವು ದೃಶ್ಯಗಳಲ್ಲಿ ಬರುವ ಲೇಡಿ ಡಾಕ್ಟರ್ ಮಾತುಗಳು ಹಾಸ್ಯಾಸ್ಪದ. ಕಥಾವಸ್ತುವನ್ನು ಅರ್ಥ ಮಾಡಿಕೊಳ್ಳಲು ಆಗದಷ್ಟು ಗೊಂದಲವನ್ನು ಧಾರಾವಾಹಿ ಹುಟ್ಟುಹಾಕಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

ವಾರದ ಪತ್ರ

## ಬಿಗ್ ಬಾಸ್: ನೀರನ್ನು ಉಳಿಸಿ

ಕಲರ್ಸ್ ಕನ್ನಡದ 'ಬಿಗ್ ಬಾಸ್' ಸ್ಪರ್ಧಿಗಳಲ್ಲಿ ಅನೇಕರಿಗೆ ಅವರದೇ ಆದ ಅಭಿಮಾನಿಗಳಿದ್ದಾರೆ. ಅನೇಕರು ಅವರನ್ನು ಅನುಕರಣೆ ಮಾಡುವ ಸಾಧ್ಯತೆಯೂ ಇದೆ. ಆದ್ದರಿಂದ ಸ್ಪರ್ಧಿಗಳು ತಮ್ಮ ಕೆಲಸ ಮತ್ತು ಮಾತನ್ನು ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ. ಇಂದಿನ ದಿನಗಳಲ್ಲಿ ನೀರು ಅತ್ಯಮೂಲ್ಯ. ಕಳೆದ ಬೇಸಿಗೆಯಲ್ಲಿ ನೀರಿಗಾಗಿ ಹಾಹಾಕಾರ ಉಂಟಾಗಿತ್ತು. ಇದು ಬಹುತೇಕರ ಅನುಭವಕ್ಕೂ ಬಂದಿದೆ. ಆದರೆ ಬಿಗ್ ಬಾಸ್ ಮನೆಯಲ್ಲಿ ನೀರಿನ ಬಗ್ಗೆ ಕಾಳಜಿಯೇ ಇಲ್ಲ. ನೀರನ್ನು ಬಿಟ್ಟು ಕನ್ನಡಿಯ ಮುಂದೆ ಮುಖ ನೋಡಿಕೊಳ್ಳುತ್ತಾ ಕೆಲವು ಸ್ಪರ್ಧಿಗಳು ನಿಂತಿರುತ್ತಾರೆ. ಅಲ್ಲಿ ನೀರಿಗೆ ತೊಂದರೆ ಇಲ್ಲದಿದ್ದರೂ ನೀರನ್ನು ವ್ಯರ್ಥ ಮಾಡುವುದು ಒಳ್ಳೆಯ ವರ್ತನೆಯಂತೂ ಅಲ್ಲ.

—ಪುಷ್ಪಾ ಎನ್.ಕೆ. ರಾವ್, ಉಡುಪಿ

## ಸಿನಿಮಾ ಪಾತ್ರ ನಿಜ ಜೀವನಕ್ಕೆ ಬೇಕೆ?

'ಸೈನಿಕ' ಸಿನಿಮಾದಲ್ಲಿ ಸೈನಿಕನ ಪಾತ್ರವನ್ನು ವಹಿಸಿದ್ದರು ಎನ್ನುವ ಕಾರಣದಿಂದ ಸಿ.ಪಿ. ಯೋಗೇಶ್ವರ್ ಅವರನ್ನು ನಮ್ಮ ಮಾಧ್ಯಮಗಳು 'ಸೈನಿಕ' ಎಂದೇ ಕರೆಯುತ್ತಿವೆ. ಸೈನಿಕ ಎಂಬ ಸಿನಿಮಾದಲ್ಲಿ ನಟಿಸಿರುವ ನಟನನ್ನು ಸೈನಿಕ ಎಂದೇ ಕರೆಯುವುದಾದರೆ, 'ಅಯೋಗ್ಯ', 'ಗುಲಾಮ', 'ಹುಚ್ಚ', 'ಪೊರ್ಕಿ' ಮೊದಲಾದ ಚಲನಚಿತ್ರಗಳಲ್ಲಿ ನಟಿಸಿರುವ ನಟರನ್ನು ನಮ್ಮ ವಾಹಿನಿಗಳು ಏನೆಂದು ಕರೆಯುತ್ತವೆ?

—ಪಿ.ಜೆ. ರಾಘವೇಂದ್ರ, ಮೈಸೂರು




## 'ಬಂಗಾರದ ಪಂಜರ' ನೆನಪಿಸಿದ ಹನುಮಂತು

ಕಲರ್ಸ್ ಕನ್ನಡದ 'ಬಿಗ್ ಬಾಸ್' ರಿಯಾಲಿಟಿ ಶೋನಲ್ಲಿ ಕಂಟೆಂಟ್ ಇಟ್ಟುಕೊಂಡು ಸ್ಪರ್ಧಿ ಜಗದೀಶ್ ಒಂದು ರೀತಿಯ ಮನರಂಜನೆ ನೀಡಿದ್ದಂತೂ ಸತ್ಯ. ಶೋದಿಂದ ಅವರು ಅನಿರೀಕ್ಷಿತವಾಗಿ ನಿರ್ಗಮಿಸಿದರು. ವೈಲ್ಡ್ ಕಾರ್ಡ್ ಎಂಟ್ರಿ ಮೂಲಕ ಗಾಯಕ ಹನುಮಂತ ಆಗಮಿಸಿದ್ದಾರೆ. ಕೃತಕತೆ ಇಲ್ಲದೆ ಮುಗ್ಧ ಮಾತುಗಳಿಂದ, ಸಂದರ್ಭಕ್ಕೆ ತಕ್ಕಂತೆ ಗಾದೆಗಳನ್ನು ಹೇಳುವ ಹನುಮಂತನ ಆಟ ಸೊಗಸೆನಿಸಿದೆ. ಅವರ ಆಟವನ್ನು ನೋಡಿದಾಗ ರಾಜ್ ಅಭಿನಯದ 'ಬಂಗಾರದ ಪಂಜರ' ಸಿನಿಮಾ ನೆನಪಾಯಿತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಸಮಾಜಕ್ಕೇನು ಸಂದೇಶ?

ಕನ್ನಡದ 'ಬಿಗ್ ಬಾಸ್' ನಿಜಕ್ಕೂ ಸಮಾಜಕ್ಕೆ ಒಂದು ಕೆಟ್ಟ ಸಂದೇಶ ನೀಡುವ ಕಾರ್ಯಕ್ರಮವಾಗುತ್ತಿರುವುದು ದುರದೃಷ್ಟಕರ.

ಸ್ಪರ್ಧಿ ಚೈತ್ರಾ ಕುಂದಾಪುರ ಅವರ ನಡೆ, ನುಡಿ ನೋಡುಗರಿಗೆ ಮುಜುಗರ ಉಂಟುಮಾಡುತ್ತಿದೆ. ಟೀವಿ ಬಗ್ಗೆ ಜನಮಾನಸದಲ್ಲಿರುವ ಉಂಟಾಗಿರುವ ತಾತ್ಸಾರ ಮನೋಭಾವನೆಗೆ ಇಂತಹ ಕಾರ್ಯಕ್ರಮಗಳು ಮತ್ತಷ್ಟು ಪುಷ್ಟೀಕರಣ ನೀಡುತ್ತವೆ. ಸಮಾಜದ ಸ್ವಾಸ್ಥ್ಯಕ್ಕೆ ಧಕ್ಕೆ ತರುವ ಕಾರ್ಯಕ್ರಮಗಳನ್ನು ನೀಡುವುದನ್ನು ಬಿಟ್ಟು ಜನರಿಗೆ ಉತ್ತಮ ಸಂದೇಶ ನೀಡುವುದೇ ಟೀವಿ ವಾಹಿನಿಗಳ ಆದ್ಯತೆಯಾಗಬೇಕು!

—ಚಾವಲ್ಮನೆ ಸುರೇಶ್ ನಾಯಕ್

## ಅಭಿನಂದನೀಯ ಮಾಲತಿ ಸಾಹಸ

ಚಂದನ ವಾಹಿನಿಯಲ್ಲಿ ಕ್ರೀಡಾಪಟು ಮಾಲತಿ ಕೃಷ್ಣಮೂರ್ತಿ ಹೊಳ್ಳ ಅವರ ಸಂದರ್ಶನವನ್ನು ನಾ. ಸೋಮೇಶ್ವರ ಸೊಗಸಾಗಿ ನಡೆಸಿಕೊಟ್ಟರು. 15 ವರ್ಷ ಆಸ್ಪತ್ರೆಯಲ್ಲಿ ಇದ್ದುಕೊಂಡೇ ಡಿಗ್ರಿ ಮಾಡಿರುವ ಮಾಲತಿ, ಸ್ವಸಾಮರ್ಥ್ಯದಿಂದ ಪ್ಯಾರಾ ಅಥ್ಲೀಟ್ ಅಭ್ಯಾಸ ಮಾಡಿ ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿದ್ದಾರೆ. ಸ್ವತಃ ಅವರೇ ತಾರಾ ಫೌಂಡೇಷನ್ ನಡೆಸುತ್ತಿದ್ದು, ಅವರ ಸಾಹಸಕ್ಕೆ ಅಭಿನಂದನೆಗಳು.

—ರಾಗಿಣಿ ಗುರುರಾಜ್, ಬೆಂಗಳೂರು

ನಾ. ಸೋಮೇಶ್ವರ್ ನಡೆಸಿಕೊಡುವ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ಗೌರಿ ಸುಬ್ರಹ್ಮಣ್ಯ ಅವರ ಸಂದರ್ಶನ ಸೊಗಸಾಗಿತ್ತು. ಮಾಲತಿ ಹೊಳ್ಳ ಮತ್ತು ಡಾ. ಪ್ರೇಮ ಧನರಾಜ್ ಅವರ ಸಂದರ್ಶನಗಳೂ ಮನಮಿಡಿಯುವಂತಿದ್ದವು. ಚಂದನ ವಾಹಿನಿಗೆ ಹೃತ್ಪೂರ್ವಕ ವಂದನೆಗಳು.

—ಗಾಯತ್ರಿ ಸ್ವಾಮಿ